7. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ರಾಜ್ಯದಲ್ಲಿ ರೈತರು ಬೆಳೆದಿರುವ ಬೆಳೆಗಳಿಗೆ ಬೆಲೆ ಕುಸಿತವುಂಟಾಗಿರುವ ಬಗ್ಗೆ ಚರ್ಚೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ರೈತರ ಬೆಳೆಗಳ ಬೆಲೆಗಳು ಕುಸಿದಿರುವ ಬಗ್ಗೆ ನಿಯಮ 69ರಡಿಯಲ್ಲಿ ಕಳೆದ ಎಂಟು ದಿವಸಗಳಿಂದ ಅಜೆಂಡಾದಲ್ಲಿ ಬರುತ್ತಿದೆ. ಸಿಂಧನೂರಿನಲ್ಲಿ ಸತ್ಯಾಗ್ರಹ ಮುಂದುವರಿದಿದೆ. ಅವರೆಲ್ಲರೂ ಕಷ್ಟದಲ್ಲಿದ್ದಾರೆ. ಆದುದರಿಂದ ದಯಮಾಡಿ ತಾವು ನಾಳೆ ಅಥವಾ ನಾಳಿದ್ದು ಪ್ರಿಯಾರಿಟಿ ಬೇಸಿಸ್ ಮೇಲೆ ಈ ವಿಷಯದ ಬಗ್ಗೆ ಚರ್ಚೆ ಮುಂದುವರಿಸಲು ಅವಕಾಶ ಮಾಡಿಕೊಡಬೇಕು. ಸರ್ಕಾರದಿಂದ ಪರಿಹಾರ ಕಂಡಿಹಿಡಿದಿರುವ ಬಗ್ಗೆ ಸ್ಪಷ್ಟ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು :— ಬೆಲೆ ಕುಸಿದಿರುವ ಬಗ್ಗೆ ನಡೆಯುತ್ತಿದ್ದ ಚರ್ಚೆಯನ್ನು ನಾವು ಮುಂದಕ್ಕೆ ಹಾಕಲಿಲ್ಲ. ಈ ಚರ್ಚೆ ನಡೆಯಬೇಕೆಂದಿರುವಾಗಲೇ ಬೇರೆ ಬೇರೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹಲವಾರು ಸದಸ್ಯರು ಹೇಳಿದ್ದರಿಂದಲೇ ಬೆಲೆ ಕುಸಿತದ ಬಗ್ಗೆ ಚರ್ಚೆ ಮುಂದಕ್ಕೆ ಹೋಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ರೈತರು ಬೆಳೆದ ಬೆಲೆಗಳು ಕುಸಿದಿರುವ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಹೇಳಿಕೆಯನ್ನು ಕೊಡುತ್ತಾರೆ. ಆದರೆ ಈ ವಿಷಯದ ಬಗೆಗಿನ ಚರ್ಚೆಯೇ ಇನ್ನೂ ಮುಗಿದಿಲ್ಲ. ಇದನ್ನು ಮುಗಿಸಿದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇನ್ನು ಎರಡನೆಯದಾಗಿ ವಿಶ್ವ ಬ್ಯಾಂಕ್ ಛೇರ್ಮನ್‌ರವರು ಬೆಂಗಳೂರಿಗೆ ಬಂದಿದ್ದರ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆಯೂ ಕೂಡ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದರ ಬಗ್ಗೆ ಕೂಡ ಹೇಳಿಕೆ ಕೊಡುತ್ತಾರೆ. ಈಗ ಎರಡು ವಿಧೇಯಕಗಳನ್ನು ಮಂಡಿಸಲು ನನಗೆ ಅವಕಾಶ ಕೊಡಬೇಕೆಂದು ವಿನಂತಿ.

ಅಧ್ಯಕ್ಷರು :— ಈಗ ವಿಧೇಯಕಗಳನ್ನು ಮಂಡಿಸಿ.

8. ಶಾಸನ ರಚನೆ

ಎ) ವಿಧೇಯಕ ಮಂಡನೆ

(4) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ